02.06.2006ರ ತೀರ್ಪಿನಲ್ಲಿ ಮೇಲ್ಕಂಡ ಆದೇಶವನ್ನು ಅನುಜ್ಞಿತಗೊಳಿಸಿ ಹಿನ್ನೆಲೆಯಲ್ಲಿ ಕೇವಲ ಆನ್‌ಲೈನ್ ಲಾಟರಿಯನ್ನು ರಾಜ್ಯದಲ್ಲಿ ನಿಷೇಧಿಸಲು ಅವಕಾಶವಿಲ್ಲ. ಆದ್ದರಿಂದ ರಾಜ್ಯದಲ್ಲಿ ಲಾಟರಿಯನ್ನು ನಿಷೇಧಿಸಲು ಉದ್ದೇಶಿಸಿದ್ದಲ್ಲಿ ಪೇಪರ್ ಹಾಗೂ ಆನ್‌ಲೈನ್ ಲಾಟರಿ ಎರಡನ್ನೂ ನಿಷೇಧಿಸಬೇಕೆಂದು ಆದೇಶಿಸಿದೆ. ಸಧ್ಯ ರಾಜ್ಯದಲ್ಲಿ ಲಾಟರಿಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲವಾದ್ದರಿಂದ ಕರ್ನಾಟಕ ರಾಜ್ಯದಲ್ಲಿ ಹೊರ ರಾಜ್ಯಗಳು ಫ್ಲೇವಿನ್ ಲಾಟರಿಯನ್ನು ಮರು ಪ್ರಾರಂಭಿಸಿರುತ್ತವೆ.

ಆ) ಹೌದು. ಆದರೆ, ಕರ್ನಾಟಕ ರಾಜ್ಯವು ತನ್ನ ಲಾಟರಿಗಳನ್ನು ನಡೆಸುತ್ತಿರುವುದರಿಂದ ಹೊರ ರಾಜ್ಯಗಳ ಫ್ಲೇವಿನ್ ಲಾಟರಿಯನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದ ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಒಂದಂಕಿ ಲಾಟರಿಯನ್ನು ರಾಷ್ಟ್ರಾದ್ಯಂತ ನಿಷೇಧಿಸಿದ್ದು, ರಾಜ್ಯ ಸರ್ಕಾರವೂ ಸಹ ಒಂದಂಕಿ ಲಾಟರಿಯನ್ನು ನಿಷೇಧಿಸಿರುತ್ತದೆ.

802 (995) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ವ್ಯವಸಾಯದಲ್ಲಿ ಜೈವಿಕ ತಂತ್ರಜ್ಞಾನ ಅಳವಡಿಸುವ ಬಗ್ಗೆ ತರಬೇತಿ ನೀಡುವ ಹಾಗೂ ಆರ್ಥಿಕ ಸಹಾಯ ನೀಡುವ ಯೋಜನೆ ಸರ್ಕಾರಕ್ಕೆ ಇದೆಯೇ ;

ಆ) ಹಾಗಿದ್ದಲ್ಲಿ, ರೈತರಿಗೆ ಇದನ್ನು ಯಾವಾಗ ಹಾಗೂ ಯಾವ ರೀತಿಯಲ್ಲಿ ನೀಡಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

803 (997) ಶ್ರೀ ಶಿವಶಂಕರತ ರೆಡ್ಡಿ ಎನ್.ಹೆಚ್. (ಗೌರಿಬಿದನೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೋಬಳಿಯ ಮಟ್ಟದಲ್ಲಿ ಕಂದಾಯ ದಾಖಲೆಗಳ ಗಣಕೀಕರಣ ಇನ್ನೂ ಕಾರ್ಯಗತವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಗಣಕೀಕರಣ ಜಾರಿಯಾಗಿದ್ದಲ್ಲಿ, ಎಲ್ಲೆಲ್ಲಿ ಕಂದಾಯ ದಾಖಲೆಗಳು ಗಣಕೀಕರಣವಾಗಿದೆ ; (ಜಿಲ್ಲಾವರು ಹಾಗೂ ತಾಲ್ಲೂಕುವಾರು ವಿವರ ನೀಡುವುದು) ;

ಇ) ಪಹಣಿಗಳ ಜೊತೆಗೆ ಜನನ ಮರಣ ಪ್ರಮಾಣ ಪತ್ರ, ಜಾತಿಯ ಪ್ರಮಾಣ ಪತ್ರ ಮತ್ತು ವಾರಸುದಾರರ ದೃಢೀಕರಣ ಪತ್ರಗಳನ್ನು ಗಣಕೀಕೃತಗೊಳಿಸಲು ಸಾಧ್ಯವಾಗುವುದಿಲ್ಲವೆ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಗ್ರಾಮ ಮಟ್ಟದವರೆಗಿನ ಎಲ್ಲಾ ಆರ್.ಟಿ.ಸಿ.ಗಳನ್ನು ಗಣಕೀಕರಣ ಗೊಳಿಸಲಾಗಿದ್ದು, ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಗಣಕೀಕೃತ ಆರ್.ಟಿ.ಸಿ.ಗಳು ಲಭ್ಯವಿದೆ. ಸರ್ಕಾರವು "ನೆಮ್ಮದಿ" ಎಂಬ ಹೊಸ ಯೋಜನೆಯೊಂದನ್ನು ಪ್ರಾರಂಭಿಸಿದ್ದು, ಹೋಬಳಿಯ ಮಟ್ಟದ ಈ ಕೇಂದ್ರಗಳಿಂದ ಗಣಕೀಕೃತ ಪಹಣಿಗಳು ಲಭ್ಯವಾಗಲಿದೆ. ಪಹಣಿಗಳಲ್ಲದೆ ಉಳಿದ ಕಂದಾಯ ದಾಖಲೆಗಳನ್ನು ಯುಕ್ತ ಕಾಲದಲ್ಲಿ ಗಣಕೀಕರಣಗೊಳಿಸಲಾಗುವುದು.

ಆ) ಎಲ್ಲಾ ಹೋಬಳಿಗಳ ಆರ್.ಟಿ.ಸಿ. ದಾಖಲೆಗಳನ್ನು ಗಣಕೀಕೃತ ಗೊಳಿಸಲಾಗಿದೆ.

ಇ) ಪಹಣಿಗಳ ಜೊತೆಗೆ ಜನನ ಮರಣ ಪ್ರಮಾಣ ಪತ್ರ ಜಾತಿಯ ಪ್ರಮಾಣ ಪತ್ರಗಳನ್ನು ಗಣಕೀಕೃತಗೊಳಿಸಲು ಸಾಧ್ಯ ಅದನ್ನು "ನೆಮ್ಮದಿ" ಯೋಜನೆಯಡಿ ಕಾರ್ಯಗತಗೊಳಿಸಲಾಗುತ್ತಿದೆ. ವಾರಸುದಾರರ ದೃಢೀಕರಣ ಪತ್ರಗಳ ವಿತರಣೆ ಕಂದಾಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ ಆದರೆ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ಇಲಾಖೆಯಿಂದ ವಿತರಿಸಲಾಗುತ್ತಿದ್ದು, ಇದನ್ನು "ನೆಮ್ಮದಿ" ಯೋಜನೆಯಡಿ ಗಣಕೀಕರಣ ಗೊಳಿಸಲಾಗುತ್ತಿದೆ.

804 (891) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ರಾಜ್ಯದಲ್ಲಿ ಇದುವರೆವಿಗೂ ಎಷ್ಟು ತಾಲ್ಲೂಕುಗಳಿಗೆ ಮಿನಿ ವಿಧಾನಸೌಧ ಕಟ್ಟಡ ಮಂಜೂರಾತಿ ನೀಡಲಾಗಿದೆ ;

ಆ) ಜಮಖಂಡಿಗೆ ಮಿನಿ ವಿಧಾನಸೌಧದ ಕಟ್ಟಡ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು ;

ಇ) ಹಲವು ಇಲಾಖೆಗಳ ಬಹಳಷ್ಟು ಕಛೇರಿಗಳು ಇನ್ನೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬಂದಿದ್ದರೆ, ಎಂದಿನಿಂದ ಕಟ್ಟಡವನ್ನು ಪ್ರಾರಂಭಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ರಾಜ್ಯದಲ್ಲಿ ಇದುವರೆವಿಗೂ 100 ತಾಲ್ಲೂಕುಗಳಿಗೆ ಮಿನಿ ವಿಧಾನಸೌಧ ಕಟ್ಟಡ ಮಂಜೂರಾತಿ ನೀಡಲಾಗಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.